# ಪ್ರಭಾತಪಂಚಕಮ್ — ೧

ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಪ್ರಭಾತಪಂಚಕಮ್ — ಪ್ರಥಮಶ್ಲೋಕ | 2 |
| ಸ್ತೋತ್ರದ ಪೂರ್ಣಪಾಠ | 5 |
| ಶ್ರೀಮತ್ಸ್ಯನಲ್ಲಿ ಪ್ರಾರ್ಥನೆ | 15 |
| ಶ್ರೀಕೂರ್ಮನಲ್ಲಿ ಪ್ರಾರ್ಥನೆ | 16 |
| ಶ್ರೀವರಾಹನಲ್ಲಿ ಪ್ರಾರ್ಥನೆ | 18 |
| ಶ್ರೀ ನರಸಿಂಹನಲ್ಲಿ ಪ್ರಾರ್ಥನೆ | 20 |
| ಶ್ರೀ ವಾಮನನಲ್ಲಿ ಪ್ರಾರ್ಥನೆ | 21 |
| ಶ್ರೀಪರಶುರಾಮಲ್ಲಿ ಪ್ರಾರ್ಥನೆ | 21 |
| ಶ್ರೀ ಶ್ರೀರಾಮನಲ್ಲಿ ಪ್ರಾರ್ಥನೆ | 22 |
| ಶ್ರೀಕೃಷ್ಣನಲ್ಲಿ ಪ್ರಾರ್ಥನೆ | 23 |
| ಬುದ್ಧ-ಕಲ್ಕಿಯರಲ್ಲಿ ಪ್ರಾರ್ಥನೆ | 24 |

## ಪ್ರಭಾತಪಂಚಕಮ್ — ಪ್ರಥಮಶ್ಲೋಕ

ನಿದ್ರೆಯಿಂದ ಏಳುತ್ತಿದ್ದಂತೆ ಶ್ರೀಹರಿಯ ಸ್ಮರಣೆಯನ್ನು ಮಾಡಬೇಕು ಎಂದು ಸದಾಚಾರಸ್ಮೃತಿಯಲ್ಲಿ ಶ್ರೀಮದಾಚಾರ್ಯರು ಮಾಡಿದ ಆದೇಶವನ್ನು ತಿಳಿದೆವು.

ಬೆಳಗಿನ ಜಾವದಲ್ಲಿ ಪರಮಾತ್ಮನಿಗೆ ಸುಪ್ರಭಾತವನ್ನು ಹೇಳಬೇಕು. ಅವನು ರಾಜ. ಇಡಿಯ ಬ್ರಹ್ಮಾಂಡದ ಒಡೆಯ. ಹೀಗಾಗಿ ಅವನಿಗೆ ನಾವು ಸುಪ್ರಭಾತವನ್ನು ಹಾಡಬೇಕು. ಅವನ ಭಕ್ತರಾದ ದೇವತೆಗಳಿಗೆ, ಅವನ ಚಲಪ್ರತಿಮೆಗಳಾದ ಗುರುಗಳಿಗೆ ಸುಪ್ರಭಾತವನ್ನು ಹಾಡಬೇಕು.

ಆವನಿಗೆ ಸುಪ್ರಭಾತವನ್ನು ಹಾಡುವ ಉದ್ದೇಶ ನಮ್ಮ ದಿವಸ ಸುದಿವಸವಾಗಲಿ, ನಮಗೆ ಉತ್ತಮ ಬೆಳಗಾಗಲಿ ಎಂದು.

ಹೀಗಾಗಿ ನಮಗೆ ಸುಪ್ರಭಾತವಾಗಲಿ, ಶುಭವಾಗಲಿ ಎನ್ನುವ ಉದ್ದೇಶದಿಂದ ಭಗವಂತನಿಗೆ ನಾವು ಸುಪ್ರಭಾತವನ್ನು ಹಾಡುತ್ತೇವೆ. "ಯದ್ಯಜ್ಜನೋ ಭಗವತೇ ವಿದಧೀತ ಮಾನಂ ತಚ್ಚಾತ್ಮನೇ ಪ್ರತಿಮುಖಸ್ಯ ಯಥಾ ಮುಖಶ್ರೀಃ" ಪರಮಾತ್ಮನಿಗೆ ನಾವು ಸಲ್ಲಿಸುವ ಪೂಜೆಯ ನಮ್ಮ ಸೌಭಾಗ್ಯವಾಗಿ ನಮಗೆ ಹಿಂತಿರುಗುತ್ತದೆ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ವಿದ್ಯಾಪರಂಪರೆಯಾದ, ಶ್ರೀಮದ್ ವ್ಯಾಸರಾಜಸಂಸ್ಥಾನದ ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದರು ಈ ರಹಸ್ಯವನ್ನರಿತು ಒಂದು ಅದ್ಭುತ ಸುಪ್ರಭಾತವನ್ನು ರಚಿಸಿ ನಮಗೆ ನೀಡಿದ್ದಾರೆ, ನಮಗೆ ಸುಪ್ರಭಾತವಾಗಲಿ ಎಂದು ಪರಮಾತ್ಮನನ್ನು ಪ್ರಾರ್ಥಿಸುವ ದಿವ್ಯ ಸುಪ್ರಭಾತ.

ವಿದ್ಯಾಕರ್ಣಾಟಕಸಿಂಹಾಸನಾಧೀಶ್ವರರಾದ ಆ ಮಹಾಗುರುಗಳಿಗೆ ಪುರಾಣಗಳಲ್ಲಿ, ಇತಿಹಾಸದಲ್ಲಿ, ಶ್ರೀಮದಾಚಾರ್ಯರ ಶಾಸ್ತ್ರದಲ್ಲಿ ಅದೆಷ್ಟು ಪರಿಶುದ್ಧವಾದ ಜ್ಞಾನವಿದೆ ಎನ್ನುವದಕ್ಕೆ

ಈ ಪುಟ್ಟದಾದ — ಆದರೆ ಅರ್ಥದಲ್ಲಿ ಸಮುದ್ರದಷ್ಟು ಗಂಭೀರವಾದ — ಏಳು ಶ್ಲೋಕಗಳ ಸ್ತೋತ್ರವೇ ಸಾಕ್ಷಿ.

ಮೊದಲಿಗೆ, ನಮಗೆ ನಾವು ಸುಪ್ರಭಾತವನ್ನು ಹೇಳಿಕೊಳ್ಳುವದು ಶ್ರೇಷ್ಠವಾದ ಧರ್ಮ. ಹಾಸಿಗೆಯಿಂದ ಏಳುತ್ತಲೇ ನಮಗೆ ನಾವು ಸುಪ್ರಭಾತ ಹೇಳಿಕೊಳ್ಳಬೇಕು, ಎದ್ದು ಶೌಚ ದಂತಧಾವನಗಳನ್ನು ಮುಗಿಸಿ ದೇವರ ಮನೆಯ ಬಳಿಗೆ ಬಂದು ನಮಸ್ಕಾರ ಮಾಡಿ ಅಲ್ಲಿ ಕುಳಿತು ದೇವರಿಗೆ, ದೇವತಾ ಗುರುಗಳಿಗೆ ಸುಪ್ರಭಾತವನ್ನು ಹೇಳುವದು ಶ್ರೇಷ್ಠವಾದ ಸಂಪ್ರದಾಯ.

ಆದರೆ ನಮಗೆ ನಾವು ಸುಪ್ರಭಾತವನ್ನು ಹೇಳಿಕೊಳ್ಳುವ ಮತ್ತೊಂದು ಮಹಾ ಧರ್ಮವನ್ನು ಶ್ರೀ ವೇದವ್ಯಾಸದೇವರು ವಾಮನಪುರಾಣದಲ್ಲಿ ತಿಳಿಸುತ್ತಾರೆ. ಶ್ರೀ ರುದ್ರದೇವರು “ಕುರ್ವಂತು ಸರ್ವೇ ಮಮ ಸುಪ್ರಭಾತಮ್” ಎಂದು ಐದು ಶ್ಲೋಕಗಳ ಸುಪ್ರಭಾತವನ್ನು ಸುಕೇಶಿಗೆ ಉಪದೇಶಿಸುತ್ತಾರೆ.  (ಸದಾಚಾರಸ್ಮೃತಿಯ ಆರನೆಯ ಉಪನ್ಯಾಸದಲ್ಲಿ, VNU187ನಲ್ಲಿ

ಅದರ ಪೂರ್ಣಪಾಠವನ್ನು ಹೇಳಿ ಅರ್ಥವನ್ನು ತಿಳಿಸಿದ್ದೇನೆ)

ಪರಮಶಿವ ತೋರಿಕೊಟ್ಟ ಈ ಸತ್ಸಂಪ್ರದಾಯವನ್ನು ತಿಳಿದ ಶ್ರೀ ಕಂಬಾಲೂರು ರಾಮಚಂದ್ರತೀರ್ಥಶ್ರೀಪಾದರ ವಾತ್ಸಲ್ಯದ ಶಿಷ್ಯರಾದ ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದರು ಶ್ರೀಮದಾಚಾರ್ಯರ ಶಾಸ್ತ್ರದ ಸಾರವನ್ನು ತುಂಬಿಸಿದ ಐದು ಸುಪ್ರಭಾತಗಳುಳ್ಳ ಪ್ರಭಾತಪಂಚಕವನ್ನು ನಮ್ಮ ಮೇಲಿನ ಅನುಗ್ರಹದಿಂದ ರಚನೆ ಮಾಡಿ ನೀಡಿದ್ದಾರೆ —

## ಸ್ತೋತ್ರದ ಪೂರ್ಣಪಾಠ

|| ಅಥ ಶ್ರೀ ಪ್ರಭಾತಪಂಚಕಸ್ತೋತ್ರಮ್ ||

ಶ್ರೀಮತ್ಸ್ಯಕೂರ್ಮಾಖ್ಯವರಾಹದೇವಾಃ
ನೃಕೇಸರೀ ವಾಮನಜಾಮದಗ್ನ್ಯೌ |
ಶ್ರೀರಾಮಕೃಷ್ಣಾವಪಿ ಬುದ್ಧಕಲ್ಕೀ
ಕುರ್ವಂತು ಸರ್ವೇ ಮಮ ಸುಪ್ರಭಾತಮ್ || 1 ||

ಶ್ರೀರಂಗನಾಥೋ ವರಸುಂದರೇಶಃ
ಶ್ರೀಮುಷ್ಣಕೋಲೋ ವರದರ್ಪಭಶ್ಚ ।
ಶ್ರೀವೇಂಕಟೇಶೋ ವರಪೂರುಷೋಽಸೌ
ಕುರ್ವಂತು ಸರ್ವೇ ಮಮ ಸುಪ್ರಭಾತಮ್ ।। 2 ।।

ಭಾಗೀರಥೀ ಪಾಪವಿನಾಶನಾಖ್ಯಾ
ಕಲಿಂದಕನ್ಯಾಪಿ ಸರಸ್ವತೀ ಚ ।
ಕವೇರಕನ್ಯಾಪಿ ಸುತೀರ್ಥಸಂಘಃ
ಕುರ್ವಂತು ಸರ್ವೇ ಮಮ ಸುಪ್ರಭಾತಮ್ ।। 3 ।।

ಶ್ರೀಕೃಷ್ಣ ನಾರಾಯಣ ವಾಸುದೇವ
ಗೋವಿಂದ ಗೋಪಾಲಕ ಮಾಧವೇತಿ ।
ಸಂಕೀರ್ತನೋದ್ಭೂತಶುಭಪ್ರಸಂಗಂ
ಕುರ್ವಂತು ಸರ್ವೇ ಮಮ ಸುಪ್ರಭಾತಮ್ ।। 4 ।।

ಶ್ರೀಮಧ್ವಭಾಷ್ಯಾಣಿ ಜಯಾರ್ಯಟೀಕಾಃ
ಶ್ರೀವ್ಯಾಸತೀರ್ಥಾರ್ಯನಿಬಂಧನಾನಿ
ಶ್ರೀರಾಮಚಂದ್ರಾರ್ಯಕೃತಪ್ರಬಂಧಾಃ
ಕುರ್ವಂತು ಸರ್ವೇ ಮಮ ಸುಪ್ರಭಾತಮ್ ।। 5 ।।

**ಇತಿ ಪ್ರಭಾತಪ್ರಂಚಕಂ**

**ಪ್ರತಿಪ್ರಭಾತಮಾದರಾತ್ ।**

**ಶುಭಂ ಪಠಂತಿ ಯೇ ನರಾ**

**ವ್ರಜತಿ ತೇ ಶುಭಾಂ ಗತಿಮ್ ।। 6 ।।**

**ರಾಮಚಂದ್ರಾರ್ಯಶಿಷ್ಯೇಣ**

**ಲಕ್ಷ್ಮೀವಲ್ಲಭಭಿಕ್ಷುಣಾ**

**ಪ್ರಭಾತಪಂಚಕಸ್ತೋತ್ರಂ**

**ಕೃತಂ ಮಂಗಲಕಾರಕಮ್ ।। 7 ।।**

**।। ಇತಿ ಶ್ರೀ ಪ್ರಭಾತಪಂಚಕಸ್ತೋತ್ರಮ್ ।।**

(ಸಂಸ್ಕೃತವಿದ್ಯಾರ್ಥಿಗಳ ಗಮನಕ್ಕೆ —

ಕಲ್ಕಿನ್ ಎಂಬ ಶಬ್ದವೂ ಇದೆ, ಕಲ್ಕಿಃ ಎಂಬ ಶಬ್ದವೂ ಇದೆ. ಹೀಗಾಗಿ “ಬುದ್ಧಕಲ್ಕೀ” ಎನ್ನುವದು ಸರಿಯಾದ ಪ್ರಯೋಗ. “ಕಲ್ಕಿಂ ಕಲ್ಕವಿನಾಶಾರ್ಥಮಾವಿರ್ಭೂತಂ ವಿದುರ್ಬುಧಾಃ” ಎಂದು ಪುರಾಣಗಳಲ್ಲಿ ಪ್ರಯೋಗವಿದೆ.)

ಈ ಪದ್ಯವನ್ನು ಸ್ತ್ರೀಯರೂ ಪಠಿಸಬೇಕು.

ಈ ಲೇಖನದಲ್ಲಿ ಮೊದಲ ಪದ್ಯದ ಅರ್ಥಾನುಸಂಧಾನವನ್ನು ಮಾಡೋಣ.

**ಶ್ರೀಮತ್ಸ್ಯಕೂರ್ಮಾಖ್ಯವರಾಹದೇವಾಃ**
**ನೃಕೇಸರೀ ವಾಮನಜಾಮದಗ್ನ್ಯೌ ।**
**ಶ್ರೀರಾಮಕೃಷ್ಣಾವಪಿ ಬುದ್ಧಕಲ್ಕೀ**
**ಕುರ್ವಂತು ಸರ್ವೇ ಮಮ ಸುಪ್ರಭಾತಮ್ ।। 1 ।।**

ಶ್ರೀ ಎಂದರೆ ಮಹಾಲಕ್ಷ್ಮೀ. ಮತ್ಸ್ಯ, ಕೂರ್ಮ, ವರಾಹ, ನೃಸಿಂಹ, ವಾಮನ, ಪರಶುರಾಮ, ಶ್ರೀರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಎಂಬ ಪರಮಾತ್ಮನ ದಶಾವತಾರದ ರೂಪಗಳನ್ನು ಚಿಂತಿಸಿ, ಆ ದಶರೂಪಗಳು ನಮಗೆ ಸುಪ್ರಭಾತವನ್ನುಂಟು ಮಾಡಲಿ ಎಂದು ಪ್ರಾರ್ಥಿಸಬೇಕು.

ಪರಮಾತ್ಮನ ರೂಪಗಳನ್ನು ಲಕ್ಷ್ಮೀಸಹಿತವನ್ನಾಗಿಯೇ ಚಿಂತಿಸಬೇಕು ಆದ್ದರಿಂದ, ಶ್ರೀ ಎನ್ನುವದು ಎಲ್ಲ ರೂಪಗಳ ಜೊತೆಯಲ್ಲಿಯೂ

ಅನ್ವಯವಾಗುತ್ತದೆ, ಶ್ರೀಮತ್ಸ್ಯ, ಶ್ರೀಕೂರ್ಮ, ಶ್ರೀವರಾಹ ಎಂದು.

ಹೀಗೆ ಒಂದೇ ಶ್ರೀಶಬ್ದ ಎಲ್ಲದರ ಜೊತೆಯಲ್ಲಿ ಅನ್ವಯವಾಗುತ್ತಿದ್ದರೂ, ಶ್ರೀಲಕ್ಷ್ಮೀವಲ್ಲಭತೀರ್ಥಶ್ರೀಪಾದರು, ರಾಮರೂಪವನ್ನು ಚಿಂತಿಸುವಾಗ ಮಾತ್ರ ಮತ್ತೊಮ್ಮೆ ಶ್ರೀಶಬ್ದವನ್ನು ಬಳಸುತ್ತಾರೆ — ಶ್ರೀರಾಮ ಎಂದು. ಮಹತ್ತ್ವದ ಕಾರಣವಿದೆ.

ಪರಮಾತ್ಮ ತನ್ನೆಲ್ಲ ರೂಪಗಳಲ್ಲಿಯೂ ದುರ್ಜನರಿಗೆ ಮೋಹಕವಾದದ್ದನ್ನೂ ಪ್ರಕಟಿಸುತ್ತಿರುತ್ತಾನೆ. ಶ್ರೀಕೃಷ್ಣ ರೂಪದಲ್ಲಿ ದೇಹತ್ಯಾಗಮಾಡಿದಂತೆ ನಟಿಸುತ್ತಾನೆ. ಸರ್ವಶಕ್ತನಾದ ಭಗವಂತ ಮತ್ಸ್ಯರೂಪದಲ್ಲಿ ಮೊದಲಿಗೆ ದೌರ್ಬಲ್ಯವನ್ನು ನಟಿಸುತ್ತಾನೆ. ಹಾಗೆ, ಶ್ರೀರಾಮರೂಪದಲ್ಲಿ ಸೀತಾದೇವಿಯನ್ನು ತ್ಯಾಗ ಮಾಡಿದಂತೆ ನಟಿಸಿದ. ಸೀತೆಗೂ ರಾಮನಿಗೂ ಒಂದು ಕ್ಷಣದ ಅನಂತಾಂಶದಲ್ಲಿಯೂ ವಿಯೋಗವಿಲ್ಲ. ಬ್ರಹ್ಮಾಂಡದ ಒಳಗಿನ ಅಣುಅಣುಗಳಷ್ಟೇ ಅಲ್ಲ, ಸಾವರಣಬ್ರಹ್ಮಾಂಡದ ಆಚೆಯ ಅವ್ಯಾಕೃತ

ಆಕಾಶ ಅಪರಿಚ್ಛಿನ್ನ ಪ್ರಕೃತಿಗಳಲ್ಲಿಯೂ ಪರಮಾತ್ಮ ರಮಾಪ್ರಣಿಯಿಯಾಗಿ ಲಕ್ಷ್ಮೀಸಮೇತನಾಗಿಯೇ ಇರುತ್ತಾನೆ. ದುರ್ಜನರ ಮೋಹನಕ್ಕೆ ಸೀತೆಯನ್ನು ಪರಿತ್ಯಜಿಸಿದಂತೆ ವಿಡಂಬನೆ ಮಾಡುತ್ತಾನೆ. ಲಕ್ಷ್ಮೀಸಮೇತವಾದ ರೂಪಗಳನ್ನು ಚಿಂತಿಸುವಾಗ ಶ್ರೀರಾಮರೂಪದಲ್ಲಿ ಇನ್ನೂ ಹೆಚ್ಚಿಗೆ ಅವರಿಬ್ಬರ ನಿತ್ಯಾವಿಯುಕ್ತತ್ವವನ್ನು ಚಿಂತಿಸಬೇಕು. ಸೀತೆಯಿಂದ ವಿಯೋಗ ರಾಮನಿಗೆ ಇಲ್ಲವೇ ಇಲ್ಲ ಎನ್ನುವದನ್ನು ದೃಢವಾಗಿ ಚಿಂತಿಸಬೇಕು. ಹೀಗಾಗಿ ಎಲ್ಲ ರೂಪಗಳು ಶ್ರೀಸಮೇತವೇ ಎಂದು ಹೇಳಿಕೊಡುತ್ತಿರುವ ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದರು ಶ್ರೀರಾಮರೂಪದ ಪ್ರಸಕ್ತಿ ಬಂದಾಗ ಮಾತ್ರ ಮತ್ತೊಮ್ಮೆ ಶ್ರೀಶಬ್ದವನ್ನು ಬಳಸಿ ಶ್ರೀರಾಮ ಎಂದೇ ಕರೆದು ಆ ತತ್ವವನ್ನು ದಾರ್ಢ್ಯದಿಂದ ಅನುಸಂಧಾನ ಮಾಡುವಂತೆ ಹೇಳಿಕೊಟ್ಟರು.

ಪರಮಾತ್ಮನ ಅನಂತ ರೂಪಗಳಿವೆ. ಆದರೆ ಈ ದಶಾವತಾರಗಳನ್ನೇ ಮೊಟ್ಟ ಮೊದಲ ಶ್ಲೋಕದಲ್ಲಿ ಪ್ರಾರ್ಥಿಸುತ್ತಿರುವ ಶ್ರೀ ಲಕ್ಷ್ಮೀವಲ್ಲಭತೀರ್ಥಶ್ರೀಪಾದರು,

ಶ್ರೀಮದಾಚಾರ್ಯರು ತಿಳಿಸಿದ ಮತ್ತೊಂದು ಮಹತ್ತ್ವದ ತತ್ವವನ್ನು ಅನುಸಂಧಾನವನ್ನು ಹೇಳಿಕೊಡುತ್ತಿದ್ದಾರೆ.

ನಾವು ಸಂಸಾರದಿಂದ ಉದ್ಧಾರವಾಗಬೇಕು. ಉದ್ಧಾರವಾಗಬೇಕಾದರೆ ಪರಮಾತ್ಮನನ್ನು ಭಜಿಸಬೇಕು.

ಯಾವ ರೂಪದ ಪರಮಾತ್ಮನನ್ನು ಭಜಿಸಬೇಕು? ಯಾವುದು ನಮಗೆ ಸನ್ನಿಹಿತವೋ, ಯಾವ ರೂಪಗಳು ನಮಗಾಗಿ ಅವತೀರ್ಣವಾಗಿ[1] ಬಂದಿವೆಯೋ ಆ ರೂಪಗಳನ್ನು ಚಿಂತಿಸಬೇಕು.

ಈ ಬಾರಿಯ ಪಂಚಾಂಗಶ್ರವಣದ ಉಪನ್ಯಾಸದಲ್ಲಿ ಶ್ವೇತವರಾಹಕಲ್ಪ, ಮನ್ವಂತರ, ಮಹಾಯುಗ, ಯುಗಗಳ ಕುರಿತು ವಿಸ್ತಾರವಾಗಿ ತಿಳಿದೆವು.

---

[1] ಲಕ್ಷ್ಮೀವಿಯುಕ್ತತ್ವ, ಅವತೀರ್ಣ ಮುಂತಾದ ಸಂಸ್ಕೃತಶಬ್ದಗಳನ್ನು ಬೇಕೆಂದೆ ಬಳಸುತ್ತಿದ್ದೇನೆ. ಅವತರಿಸಿ ಬಂದಿವೆಯೋ ಎಂದೇ ಅರ್ಥ, ಆದರೆ, ಸಂಸ್ಕೃತಸುರಭಿಯ ಮುಖಾಂತರ ಸಂಸ್ಕೃತದ ಅಧ್ಯಯನ ಇನ್ನೇನು ಆರಂಭವಾಗುತ್ತದೆ. ಹೀಗಾಗಿ ಈ ಶಬ್ದಗಳ ಸಂಸ್ಕಾರ ದೊರೆಯಲಿ ಎಂದು ಬಳಸುತ್ತಿದ್ದೇನೆ.

ಬ್ರಹ್ಮದೇವರ ಒಂದೊಂದು ದಿವಸಕ್ಕೂ ಒಂದೊಂದು ಹೆಸರಿದೆ. ನಮ್ಮ ದಿವಸಗಳಿಗೆ ಸೋಮವಾರ, ಮಂಗಳವಾರ ಎಂಬ ಹೆಸರುಗಳಿರುವಂತೆ ಬ್ರಹ್ಮದೇವರ ದಿವಸಗಳಿಗೆ ಪಾದ್ಮಕಲ್ಪ, ವೈರಾಜಕಲ್ಪ, ಶ್ವೇತವರಾಹಕಲ್ಪ ಎಂಬ ಹೆಸರುಗಳಿವೆ.

ನಾವು ಶ್ವೇತವರಾಹಕಲ್ಪದಲ್ಲಿದ್ದೇವೆ. ಹೀಗಾಗಿ ಈ ದಿವಸ ಅವತಾರವಾಗುವ ರೂಪಗಳು ನಮಗೆ ಉಳಿದ ದಿವಸಗಳ ರೂಪಗಳಿಗಿಂತ ಹೆಚ್ಚು ಹತ್ತಿರದವು. ಅದಕ್ಕಾಗಿಯೇ ಪರಮಾತ್ಮ ಯಜ್ಞ (ಈಶಾವಾಸ್ಯೋಪನಿಷತ್ತಿನಿಂದ ಪ್ರತಿಪಾದ್ಯವಾದ ರೂಪ) ಗಜೇಂದ್ರವರದ ಮುಂತಾದ ರೂಪಗಳನ್ನು ನಾವು ಆರಾಧಿಸುತ್ತೇವೆ.

ಈ ಶ್ವೇತವರಾಹಕಲ್ಪದಲ್ಲಿಯೂ ನಾವು ಏಳನೆಯ ಮನ್ವಂತರದಲ್ಲಿದ್ದೇವೆ. ಸಮಗ್ರ ಈ ಮನ್ವಂತರದ

ಅಧಿದೈವ ಮತ್ಸ್ಯರೂಪದ ಭಗವಂತ. ಇವನನ್ನು ನಾವು ವಿಶೇಷವಾಗಿ ಆರಾಧಿಸಬೇಕು.[2]

ಈ ವೈವಸ್ವತಮನ್ವಂತರದಲ್ಲಿಯೂ ನಾವು ಇಪ್ಪತ್ತೆಂಟನೆಯ ಮಹಾಯುಗದಲ್ಲಿದ್ದೇವೆ. ಪರಮಾತ್ಮನ ಮತ್ಸ್ಯರೂಪ ಒಂದನ್ನು ಹೊರತು ಪಡಿಸಿ ಉಳಿದ ಒಂಭತ್ತೂ ರೂಪಗಳ ಅವತಾರ ಇದೇ ಮಹಾಯುಗದಲ್ಲಿ ಆಗಿರುವದು. ಈ ಒಂಭತ್ತು ಮತ್ತು ಮತ್ಸ್ಯ ಎಂಬ ವೈವಸ್ವತನ ಒಡೆಯ ಸೇರಿ ದಶಾವತಾರಗಳಾದವು.

ಈ ದಶಾವತಾರದ ರೂಪಗಳು ಇಪ್ಪತ್ತೆಂಟನೆಯ ಮಹಾಯುಗದವರಾದ ನಮ್ಮ ಮೇಲೆ ಪರಮಾತ್ಮ ಅನುಗ್ರಹ ಮಾಡಿ ಸ್ವೀಕರಿಸಿದ ರೂಪಗಳಾದ್ದರಿಂದ ನಾವು ದಶಾವತರಗಳನ್ನು ವಿಶೇಷವಾಗಿ ಚಿಂತಿಸಬೇಕು. ಈ ದಶರೂಪಗಳ ಅನುಗ್ರಹವಿದ್ದಾಗ ಮಾತ್ರ ನಾವು ಸಾಧನೆಯಲ್ಲಿ ಮುನ್ನಡೆಯಲು ಸಾಧ್ಯ. ಅದಕ್ಕಾಗಿಯೇ

[2] ಮತ್ಸ್ಯರೂಪದ ವಿಶೇಷ ಆರಾಧನೆಯನ್ನು ಪುರಾಣಗಳು ತಿಳಿಸಿವೆ. ಸಂಧ್ಯಾವಂದನೆ ದೇವರಪೂಜೆಗಳಿಂದಲೇ ದೂರವಾಗಿರುವ ನಾವು ಆ ಆರಾಧನೆಯನ್ನು ಕೈಬಿಟ್ಟಿದ್ದೇವೆ. ವಿಶ್ವನಂದಿನಿಯ ಮಾಲಿಕೆಯಲ್ಲಿ ವ್ರತ ಉತ್ಸವಗಳ ಕುರಿತು ತಿಳಿಸುವಾಗ ಅದನ್ನು ತಿಳಿಸುತ್ತೇನೆ.

ದಾಸಸಾಹಿತ್ಯದಲ್ಲಿ ದಶಾವತಾರದ ವರ್ಣನೆಯನ್ನು ವಿಪುಲವಾಗಿ ಕಾಣುತ್ತೇವೆ. ಸ್ವಯಂ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ತಮ್ಮ ದ್ವಾದಶಸ್ತೋತ್ರಗಳಲ್ಲಿ ಎರಡು ಸ್ತೋತ್ರಗಳಿಂದ ದಶಾವತರಗಳನ್ನೇ ಸ್ತೋತ್ರ ಮಾಡುತ್ತಾರೆ. ಈ ಮಹಾಸಂಪ್ರದಾಯವನ್ನರಿತ ಶ್ರೀಲಕ್ಷ್ಮೀವಲ್ಲಭತೀರ್ಥಶ್ರೀಪಾದರು ಬೆಳಗುಜಾವದಲ್ಲಿಯೇ ನಮ್ಮಿಂದ ಈ ದಶಾವತಾರಗಳ ಚಿಂತನೆಯನ್ನು ಮಾಡಿಸುತ್ತಿದ್ದಾರೆ.

ಈ ದಶಾವತಾರಗಳಲ್ಲಿಯೂ ನಮಗೆ ತುಂಬ ಹತ್ತಿರವಾದ ರೂಪದ ಶ್ರೀಕೃಷ್ಣರೂಪ. (ಬುದ್ಧರೂಪ ದುರ್ಜನರ ಮೋಹಕ್ಕಾಗಿ ಅವತರಿಸಿದ್ದು, ಶ್ರೀಕೃಷ್ಣ ಜ್ಞಾನಕಾರ್ಯ ಬಲಕಾರ್ಯಗಳಿಗಾಗಿ ಅವತರಿಸಿದ್ದು, ಹೀಗಾಗಿ ಶ್ರೀಕೃಷ್ಣನನ್ನೇವಿಶೇಷವಾಗಿ ಆರಾಧಿಸಬೇಕು ಎಂದು ಆಚಾರ್ಯರು ಭಾಗವತತಾತ್ಪರ್ಯದಲ್ಲಿ ತಿಳಿಸುತ್ತಾರೆ) ಆ ಶ್ರೀಕೃಷ್ಣರೂಪವನ್ನು ಚಿಂತಿಸುವ ಬಗೆಯನ್ನು ನಾಲ್ಕನೆಯ ಶ್ಲೋಕದಲ್ಲಿ ತಿಳಿಸುತ್ತಾರೆ, ಆಗ ವಿಸ್ತಾರವಾಗಿ ತಿಳಿಯೋಣ.

ಮತ್ತೂ, ಪರಮಾತ್ಮನ ಈ ದಶ ಅವತಾರಗಳು ಬ್ರಹ್ಮದೇವರ ದಿವಸವನ್ನೇ ಮಂಗಳವನ್ನಾಗಿ ಮಾಡುವ ಮಹಾರೂಪಗಳು. ಜಗತ್ತಿನ ಸ್ರಷ್ಟಾರರಾದ ಪಿತಾಮಹ ಬ್ರಹ್ಮದೇವರ ದಿವಸಕ್ಕೇ ಮಾಂಗಲ್ಯವನ್ನು ಕರುಣಿಸುವ ಈ ದಶರೂಪಗಳು ನಮ್ಮ ಮೇಲೂ ಕರುಣೆಯನ್ನು ತೋರಲಿ, ನಮ್ಮ ದಿವಸವನ್ನೂ ಸಾರ್ಥಕವನ್ನಾಗಿ ಮಾಡಲಿ ಎಂದು ನಮ್ಮಿಂದ ಪ್ರಾರ್ಥನೆ ಮಾಡಿಸಿದರು ಶ್ರೀಲಕ್ಷ್ಮೀವಲ್ಲಭತೀರ್ಥಶ್ರೀಪಾದರು.

ಬೆಳಿಗ್ಗೆ ಹಾಸಿಗೆಯಿಂದ ಏಳುತ್ತಿದ್ದಂತೆ ಈ ಪರಮಂಗಳ ಸ್ತೋತ್ರ ನಮ್ಮ ನಾಲಿಗೆಯಲ್ಲಿ ನಲಿಯಬೇಕು.

## ಶ್ರೀಮತ್ಸ್ಯನಲ್ಲಿ ಪ್ರಾರ್ಥನೆ

ಇಡಿಯ ಮನ್ವಂತರವನ್ನು ಪಾಲಿಸಿ, ಅಲ್ಲಿ ಹುಟ್ಟಿ ಬರುವ ಜನರಿಂದ ಸಾಧನೆಯನ್ನು ಮಾಡಿಸಿ ಸ್ವಯಂ ತಾನು ಮಹತ್ಸಾಧನೆಯನ್ನು ಮಾಡಹೊರಟಿದ್ದ ವೈವಸ್ವತಮನುವನ್ನು ಪ್ರಳಯಕಾಲದ ಭಯಂಕರ ಪರಿಸ್ಥಿತಿಯಿಂದ ಕಾಪಾಡಿದವನು ನಮ್ಮ ಸ್ವಾಮಿ,

ಲಕ್ಷ್ಮೀವಲ್ಲಭನಾದ ಮತ್ಸ್ಯ. ನಾವು ಸಹ ಸಾಧನೆ ಮಾಡಬೇಕಾಗಿದೆ. ನಮ್ಮವರಿಂದ ಸಾಧನೆ ಮಾಡಿಸಬೇಕಾಗಿದೆ. ನಮ್ಮವರೊಡನೆ ಸಾಧನೆ ಮಾಡಿಸಬೇಕಾಗಿದೆ. ಮನಸ್ಸಿನಲ್ಲಂತೂ ಸಂಕಲ್ಪವಿದೆ, ಆದರೆ ಪ್ರತಿಬಂಧಕಗಳು ಸಾವಿರಾರು. ಆ ಮತ್ಸ್ಯ ನಮ್ಮನ್ನೂ ಈ ಪರಿಸ್ಥಿತಿಯಿಂದ ಕಾಪಾಡಲಿ. ನಮಗೆ ಸುಪ್ರಭಾತವನ್ನು ಅನುಗ್ರಹಿಸಿ, ನಮ್ಮ ದಿವಸವನ್ನು ಸುದಿವಸವನ್ನಾಗಿ ಮಾಡಿ, ನಮ್ಮ ಜೀವನದಲ್ಲಿ ಭೂರಿ ಸಾಧನೆ ನಡೆಯುವಂತೆ ಅನುಗ್ರಹಿಸಲಿ.

## ಶ್ರೀಕೂರ್ಮನಲ್ಲಿ ಪ್ರಾರ್ಥನೆ

ತಂದೆ ತಾಯಿ, ಹೆಂಡತಿ, ಮಕ್ಕಳು ಮುಂತಾದವರ ಜೊತೆಯಲ್ಲಿ ಬದುಕುತ್ತಿರುವವರು ನಾವು. ಎಷ್ಟೋ ಬಾರಿ ಕುಟುಂಬದ ಭಾರವನ್ನು ತಡೆಯಲಾರದೆ ಕುಸಿಯುತ್ತೇವೆ.  ನಮಗೇನಾದರೂ ಆದಲ್ಲಿ ನಮ್ಮನ್ನು ನಂಬಿರುವ ನಮ್ಮವರ ಗತಿಯೇನು ಎಂದು ಭಯವಿಹ್ವಲರಾಗುತ್ತೇವೆ. ಎಷ್ಟೋ ಬಾರಿ ಮನೆಯಲ್ಲಿ ಕಷ್ಟವಿದ್ದಾಗ, ಸಾಲ, ರೋಗಗಳ ಭಯವಿದ್ದಾಗ ಬೆಳಿಗ್ಗೆ ಏಳುತ್ತಿದ್ದಂತೆ, ಇಂದು ಹೇಗೆ,

ಏನು ಮಾಡುವದು ಎಂಬ ಭಯ ಆವರಿಸಿಬಿಡುತ್ತದೆ. ಏಳುತ್ತಿದ್ದಂತೆ ಚಿಂತೆ.

ಕರುಣಾಳುಗಳಾದ ಶ್ರೀಲಕ್ಷ್ಮೀವಲ್ಲಭತೀರ್ಥ ಶ್ರೀಪಾದರು ನಮಗೆ ಅಭಯವನ್ನು ನೀಡಲೆಂದೆ, ನಮ್ಮ ಮೇಲೆ ಅನುಗ್ರಹ ಮಾಡಿ ಈ ಸ್ತೋತ್ರವನ್ನು ದಯಪಾಲಿಸಿದ್ದಾರೆ.

ಸಮುದ್ರವನ್ನು ಮಥಿಸುವ ಮಂದರ ಸಮುದ್ರದಲ್ಲಿ ಮುಳುಗಿಯೇ ಹೋಗುತ್ತಿದ್ದಾಗ ನಮ್ಮ ಸ್ವಾಮಿ ಶ್ರೀಕೂರ್ಮನಾಗಿ ಬಂದು ಆ ಪರ್ವತದ ಅಡಿಯನ್ನು ಸೇರಿ ತನ್ನ ಬೆನ್ನ ಮೇಲೆ ಹೊತ್ತು ನಿಂತ. ಆ ಪರ್ವತದ ಭಾರವನ್ನು ತಾಳಿ ಅದು ತಿರುಗುವಂತೆ ಮಾಡಿದ. ನಮ್ಮ ಕೌಟುಂಬಿಕ, ಸಾಂಸಾರಿಕ, ಆರ್ಥಿಕ ಸಮಸ್ಯೆಗಳ ಭಾರವನ್ನು ಶ್ರೀಹರಿ ಹೊರಲಿ. ನಾವು ಸಂಸಾರಯಾತ್ರೆಯಲ್ಲಿ ಸುಗಮವಾಗಿ ನಡೆದು ಸಾಧನಮಾರ್ಗ ನಿಷ್ಕಂಟಕವಾಗಿರುವಂತೆ ಅನುಗ್ರಹಿಸಲಿ ಎಂದು ಮಂದರವನ್ನು ಪೊತ್ತ ಭಾರಧಾರಿ ಶ್ರೀಕೂರ್ಮನನ್ನು ನೆನೆಯಬೇಕು. ಪರಮಾತ್ಮ ಅನುಗ್ರಹಿಸುತ್ತಾನೆ. ನಮ್ಮ ಭಾರವನ್ನು ಅವನು ಹೊತ್ತು ನಮ್ಮನ್ನು ರಕ್ಷಿಸುತ್ತಾನೆ.

# ಶ್ರೀವರಾಹನಲ್ಲಿ ಪ್ರಾರ್ಥನೆ

ನಾವು ಸಾಧನೆ ಮಾಡಬೇಕಾದರೆ ನಮಗೊಂದು ಭೂಮಿ ಬೇಕು. ಪ್ರತಿಯೊಬ್ಬರಿಗೂ ಅವರದೇ ಆದ ಕಾರ್ಯಭೂಮಿಯಿರುತ್ತದೆ. ಶ್ರೀಮದಾಚಾರ್ಯರು ಉಡುಪಿಯನ್ನು ಅನುಗ್ರಹಿಸಿದರು. ಶ್ರೀಮಟ್ಟೀಕಾಕೃತ್ಪಾದರು ಯರಗೋಳದ ಗುಹೆಯಲ್ಲಿ ಕುಳಿತು ಸಮಗ್ರ ಶಬ್ದವಾಙ್ಮಯದ ಅರ್ಥವನ್ನು ತಿಳಿಸಿ ಹೇಳಿದರು. ಶ್ರೀಮಚ್ಚಂದ್ರಿಕಾಚಾರ್ಯರು ವಿಜಯನಗರದಲ್ಲಿ ಕುಳಿತು ಸಮಗ್ರ ಸಜ್ಜನಸಮಾಜವನ್ನು ರಕ್ಷಿಸಿದರು. ಶ್ರೀ ವಾದಿರಾಜಗುರುವರ್ಯರು ಸ್ವಾದಿಯ ಪ್ರಶಾಂತಪ್ರದೇಶದಲ್ಲಿ, ತಪೋವನದಲ್ಲಿ ಕುಳಿತು ಇತರರಿಗೆ ಅಸಾಧ್ಯವಾದ ಅದ್ಭುತವಾದ ಸಾಧನೆಯನ್ನು ಮಾಡಿದರು. ಶ್ರೀ ವಿಜಯೀಂದ್ರಗುರುಸಾರ್ವಭೌಮರು ಕುಂಭಕೋಣದಲ್ಲಿ ಕುಳಿತು ಶ್ರೀಮಧ್ವಸಿದ್ಧಾಂತದ ದಿಗ್ವಿಜಯಪತಾಕೆಯನ್ನು ಹಾರಿಸಿದರು. ಹೀಗೆ ಪ್ರತಿಯೊಬ್ಬರಿಗೂ ಸಾಧನೆಗಾಗಿ ಒಂದೊಂದು ಪ್ರದೇಶವನ್ನು ಭಗವಂತ ಕರುಣಿಸುತ್ತಾನೆ. ಅಲ್ಲಿಯೇ ಅವರ ಸಾಧನೆ, ಅವರ ಉನ್ನತಿ. ಆಚಾರ್ಯರ

ತಮ್ಮಂದಿರಾಗಿ ಪಾಜಕದಲ್ಲಿ ಹುಟ್ಟಿ, ಉಡುಪಿಯಲ್ಲಿ ಆಚಾರ್ಯರ ಸೇವೆ ಮಾಡಿದ ಶ್ರೀಮಧ್ವಾನುಜಾಚಾರ್ಯರು ಅಪರೋಕ್ಷಜ್ಞಾನವನ್ನು ಪಡೆದದ್ದು ಮಹಾರಾಷ್ಟ್ರದಲ್ಲಿರುವ ಹರಿಶ್ಚಂದ್ರಪರ್ವತದಲ್ಲಿ. ಅಪರೋಕ್ಷಜ್ಞಾನಾನಂತರದಲ್ಲಿ ಅವರು ತಪಸ್ಸು ಮಾಡುತ್ತಿರುವದು ಸುಬ್ರಹ್ಮಣ್ಯದ ಕುಮಾರಪರ್ವತದಲ್ಲಿ.

ಹೀಗೆ, ನಮ್ಮ ಸಾಧನೆಗೆ ಅನುಕೂಲವಾದ ಭೂಮಿ ದೊರೆಯಬೇಕು. ಅಲ್ಲಿಯೇ ನಮ್ಮ ಸಾಧನೆ ನಡೆಯಬೇಕು. ತುಳಸಿ ಬೆಳೆಯದ, ನೀರು ದೊರೆಯದ ಪಟ್ಟಣಗಳಲ್ಲಿ ಇಂದಿನ ಜನರ ವಸತಿಯಾಗಿಬಿಟ್ಟಿದೆ. ಊಟ ನಿದ್ರೆಗಳೇ ಸರಿಯಾಗಿ ನಡೆಯದ ಪ್ರದೇಶದಲ್ಲಿ ಸಾಧನೆ ಜರುಗುವದೆಂತು? ಹೀಗಾಗಿ ನಮ್ಮ ಸಾಧನೆಗೆ ಅನುಕೂಲವಾದ ಪ್ರದೇಶವನ್ನು ಭಗವಂತ ಅನುಗ್ರಹಿಸಬೇಕು. ಶ್ರೀವರಾಹನನ್ನು ಅದಕ್ಕಾಗಿ ಪ್ರಾರ್ಥಿಸಬೇಕು.

# ಶ್ರೀ ನರಸಿಂಹನಲ್ಲಿ ಪ್ರಾರ್ಥನೆ

ಹಾಗೆಯೇ ಸಾಧನೆಯಲ್ಲಿನ ವಿಘ್ನಗಳ ಪರಿಹಾರಕ್ಕಾಗಿ  ಶ್ರೀನರಸಿಂಹನನ್ನು ಪ್ರಾರ್ಥಿಸಬೇಕು. ನಮ್ಮ ಸಾಧನೆಗೆ ನಾವೇ ವಿಘ್ನ. ನಮ್ಮ ಮನಸ್ಸೇ ಅಡ್ಡಿ. ನಮ್ಮವರು ಬೇಡ ಎನ್ನುತ್ತಾರೆ. ಹೊರಗಿನ ವಾತಾವರಣ ಅನುಕೂಲವಾಗಿರುವದಿಲ್ಲ. ಸಂಸಾರದ ತಾಪತ್ರಯಗಳ ಕಾಟ. ಶತ್ರುಗಳ ಕಾಟ. ರೋಗಗಳ ಚಿಂತೆ.

ಆ ಗಜೇಂದ್ರನನ್ನು ಒಂದು ಮೊಸಳೆ ಹಿಡಿದಿತ್ತು. ನಮ್ಮನ್ನು ಈ ರೀತಿಯ ನೂರಾರು ಮೊಸಳೆಗಳು ಹಿಡಿದಿವೆ. ಒಂದು ಒಂದೆಡೆಗೆ ಎಳೆದರೆ ಮತ್ತೊಂದು ಮತ್ತೊಂದೆಡೆಗೆ, ಮಗದೊಂದು ಮಗದೊಂದೆಡೆಗೆ. ಆ ಲಕ್ಷ್ಮೀನೃಸಿಂಹನೇ ನಮ್ಮ ವಿಘ್ನಗಳನ್ನು ಪರಿಹರಿಸಬೇಕು, ನಮ್ಮನ್ನು ಸಾಧನಮಾರ್ಗದಲ್ಲಿ ನಡೆಸಿ ನಮ್ಮ ಬೆಳಗು, ದಿವಸ, ಜೀವನಗಳಿಗೆ ಸಾರ್ಥಕತೆ ನೀಡಬೇಕು.

## ಶ್ರೀ ವಾಮನನಲ್ಲಿ ಪ್ರಾರ್ಥನೆ

ಸಾಧನಮಾರ್ಗದ, ಅದರಲ್ಲಿಯೂ ವಿದ್ಯೆಯ ಸಂಪಾದನೆಯ ಮಾಡುತ್ತಿದ್ದಂತೆ ಎದುರಾಗುವ ದೊಡ್ಡ ಶತ್ರು ಅಹಂಕಾರ. ಈ ಘೋರ ಕಲಿಯುಗದಲ್ಲಂತೂ ಅದರ ಬಾಧೆ ಹೆಚ್ಚು. ನಮಗೆ ಅಹಂಕಾರ ಬಂದಾಗಲೆಲ್ಲ, ವಾಮನರೂಪದ ಭಗವಂತ ಬಲಿಯನ್ನು ಪಾತಾಳಕ್ಕೆ ತುಳಿದಂತೆ ನಮ್ಮ ಅಹಂಕಾರವನ್ನು ತುಳಿಯಬೇಕು, ಮತ್ತೆ ಮೊಳಕೆಯೊಡೆಯದಂತೆ ತುಳಿಯಬೇಕು.  ಹಾಗ ನಾವವನಲ್ಲಿ ಪ್ರಾರ್ಥಿಸಬೇಕು.

## ಶ್ರೀಪರಶುರಾಮಲ್ಲಿ ಪ್ರಾರ್ಥನೆ

ಅದೆಂತಹ ಪ್ರಸಂಗ ಬಂದರೂ ಧರ್ಮವನ್ನು ಬಿಡದ ನಿಷ್ಠೆಯನ್ನು ಪರಶುರಾಮ ಅನುಗ್ರಹಿಸಬೇಕು. ಆ ದಿವಸ ದಿಕ್ಕೆಟ್ಟ ಬ್ರಾಹ್ಮಣರಿಗೆ ಆ ಪರಶುರಾಮರೂಪದ ಭಗವಂತ ಆಶ್ರಯನಾದ. ಸತ್ಯವಂತರಿಗೆ ಕಾಲವಲ್ಲದ ಕಾಲವಿದು. ಧರ್ಮಕ್ಕೆ ಕೈಬಾರದ ಕಾಲವಿದು. ಧರ್ಮ ಹೇಳಿದರೆ ಕೊಲ್ಲುತ್ತೇವೆ ಎಂದು ಮಾತಾಡುವವರ ಕಾಲವಿದು.

ಧರ್ಮದ ಆಚರಣೆ ಮಾಡುವವರೂ ನಾವೇ ಶ್ರೇಷ್ಠರು ನೀವೆಲ್ಲರೂ ಕನಿಷ್ಠರು ಎಂಬ ಮಹಾಭ್ರಮೆಗೆ ಒಳಗಾಗಿ ತಮ್ಮವರನ್ನೇ ಪೀಡಿಸುವ ಕಾಲವಿದು. ಕಾಯಬೇಕಾದ ಜನರೇ ಕೊಲ್ಲಿಸುವ ಮಾತನಾಡುತ್ತಾರೆ. ತಾವೇ ಕಟ್ಟಿಕೊಂಡ ಭ್ರಾಂತಿಯ ಸಾರ್ವಭೌಮತೆಗೆ ಕುಂದು ಬರುತ್ತದೆ ಎಂದರೆ ಧರ್ಮಿಷ್ಠರನ್ನೂ ಕೊಲ್ಲುವ ಜನ ನಮ್ಮ ಮಧ್ಯದಲ್ಲಿಯೇ ಇದ್ದಾರೆ. ಅಂದು ಕಾಯಬೇಕಾದ ಕ್ಷತ್ರಿಯರು ಕೊಲ್ಲಬಂದಂತೆ, ಇಂದು ಅಭಯ ನೀಡಬೇಕಾದವರೇ ಭಯಪ್ರದರಾಗಿದ್ದಾರೆ. ಪರಶುರಾಮ ನಮಗೆ ಶಕ್ತಿಯನ್ನು ನೀಡಬೇಕು. ನಮ್ಮನ್ನು ರಕ್ಷಿಸಬೇಕು.

## ಶ್ರೀ ಶ್ರೀರಾಮನಲ್ಲಿ ಪ್ರಾರ್ಥನೆ

ಆ ಶ್ರೀರಾಮ ಆ ದಿವಸ ರಾಮರಾಜ್ಯವನ್ನು ಪಾಲಿಸಿದ. ಕೇವಲ ಪ್ರಜೆಗಳನ್ನಲ್ಲ, ದೇವತೆಗಳನ್ನೂ, ಧರ್ಮವನ್ನೂ ನಿಯಮಿಸಿದ. ಎಲ್ಲವೂ ಶುದ್ಧವಾದ ಕ್ರಮದಲ್ಲಿಯೇ ಇರಬೇಕು ಎಂದು ಶಾಸನ ಮಾಡಿದ. ಆ ಸೀತಾಸಮೇತನಾದ ಪಟ್ಟಾಭಿರಾಮ ನಮ್ಮ ಹೃದಯದ ಪಟ್ಟದಲ್ಲಿ ಕುಳಿತು ನಮ್ಮನ್ನು,

ನಮ್ಮ ದೇಹ ಇಂದ್ರಿಯಗಳನ್ನು ಪಾಲಿಸಬೇಕು. ನಮ್ಮ ದೇಹವನ್ನು ರಾಮದೇಹವನ್ನಾಗಿ ರಾಮಪುರಿಯನ್ನಾಗಿ ಮಾಡಬೇಕು.

## ಶ್ರೀಕೃಷ್ಣನಲ್ಲಿ ಪ್ರಾರ್ಥನೆ

ಆ ಶ್ರೀರಾಮಪುರಿಯಲ್ಲಿ ಆ ಶ್ರೀಕೃಷ್ಣ ಕಂಗೊಳಿಸಬೇಕು. ಕುಳಿತಾಗ ನಿಂತಾಗ ಅವನ ಲೀಲೆಗಳು ಸ್ಮೃತಿಗೊದಗಬೇಕು. ಅವನ ಚಿಂತನೆಯೇ ಜೀವನವಾಗಬೇಕು. ಅವನ ಸ್ಮರಣೆಯೇ ತಾನೆ ಸಾಧನೆ. ಆ ಸಾಧನೆಯನ್ನು ಅವನು ಅನುಗ್ರಹಿಸಬೇಕು. ಆ ಗೋಕುಲದ ಕಂದ, ಆ ನವನೀತ ಚೋರ, ಆ ಗೋಪಿಕಾವಲ್ಲಭ, ಆ ಕಾಳಿಂಗಮರ್ದನ,ಆ ಗೋವರ್ಧನೋದ್ಧಾರಿ, ಆ ಕಂಸಾರಿ, ಆ ಮುಚುಕುಂದ ವರದ, ಆ ದ್ವಾರಕಾಧೀಶ, ಆ ಪಾಂಡವಪ್ರಿಯ, ಆ ಷಣ್ಮಹಿಷಿಯರೊಡೆಯ, ಆ ಸತ್ಯಾ-ರುಗ್ಮಿಣೀವಲ್ಲಭ ಗೋಪಾಲಕೃಷ್ಣ, ಆ ಗೀತಾಚಾರ್ಯ ನಮ್ಮ ಮನಸ್ಸನ್ನು ಆವರಿಸಿ ನಿಲ್ಲಬೇಕು. ಅವನೇ ನಮ್ಮ ಜೀವನವಾಗಿಬಿಡಬೇಕು. ಆ ಜೀವನ ಸುಜೀವನ. ಆ ದಿವಸ ಸುದಿವಸ. ಆ ಬೆಳಗು ಸುಪ್ರಭಾತ.

## ಬುದ್ಧ-ಕಲ್ಕಿಯರಲ್ಲಿ ಪ್ರಾರ್ಥನೆ

ಸಾಧನ ಮಾರ್ಗದಲ್ಲಿ ದಾರಿ ತಪ್ಪದಂತೆ ಆ ಬುದ್ಧರೂಪದ ಭಗವಂತ, ನಮ್ಮೊಳಗೆ ತುಂಬಿ ನಿಂತಿರುವ ಕಲಿಯನ್ನು ಹೊಡೆದೊಡಿಸುವ ಕಲ್ಕಿ.

ಹೀಗೆ ಸಾಧನೆಗೆ ಬೇಕಾದ ಸಕಲವನ್ನೂ ಅನುಗ್ರಹಿಸಿ, ಸಾಧನೆಯನ್ನೂ ಮಾಡಿಸಿ ನಮ್ಮನ್ನು ಉದ್ಧರಿಸಬೇಕು, ನಮ್ಮ ದಶಾವತಾರದ ಸ್ವಾಮಿ.

**ಶ್ರೀಮತ್ಸ್ಯಕೂರ್ಮಾಖ್ಯವರಾಹದೇವಾಃ**
**ನೃಕೇಸರೀ ವಾಮನಜಾಮದಗ್ನ್ಯೌ ।**
**ಶ್ರೀರಾಮಕೃಷ್ಣಾವಪಿ ಬುದ್ಧಕಲ್ಕೀ**
**ಕುರ್ವಂತು ಸರ್ವೇ ಮಮ ಸುಪ್ರಭಾತಮ್ ।। 1 ।।**

ಶ್ರೀಯುಕ್ತವಾದ ಮತ್ಸ್ಯ, ಕೂರ್ಮ, ವರಾಹ, ನೃಸಿಂಹ, ವಾಮನ, ಪರಶುರಾಮ, ಶ್ರೀರಾಮ, ಕೃಷ್ಣ ಬುದ್ಧ ಕಲ್ಕಿ ಮುಂತಾದ ಸಕಲ ಭಗವದ್ರೂಪಗಳೂ ನಮಗೆ ಸುಪ್ರಭಾತವನ್ನುಂಟು ಮಾಡಲಿ.

ಇಂತಹ ಒಂದು ಅದ್ಭುತಸ್ತೋತ್ರವನ್ನು ಬರೆದು ನೀಡಿ ನಮ್ಮನ್ನು ಅನುಗ್ರಹಿಸಿದ ಶ್ರೀಮದಾಚಾರ್ಯರ ವಿದ್ಯಾಪರಂಪರೆಯ ಶ್ರೀಮದ್ ವ್ಯಾಸರಾಜಸಂಸ್ಥಾನವೆಂಬ ವಿದ್ಯಾಕರ್ಣಾಟಕಸಿಂಹಾಸನದ ಅಧೀಶ್ವರರಾದ


Sri Lakshmivallabha Theertharu
1632-1642 , Thirumakoodalu

ಶ್ರೀಲಕ್ಷ್ಮೀವಲ್ಲಭತೀರ್ಥಶ್ರೀಪಾದಂಗಳವರ ಅನುಗ್ರಹ ಎಲ್ಲ ಸಾಧಕರ ಮೇಲಿರಲಿ ಎಂದು ಪ್ರಾರ್ಥಿಸಿ ಅವರ ಚರಣಕಮಲಗಳಿಗೆ ಸರ್ವಸ್ವವನ್ನೂ ಸಮರ್ಪಿಸಿಕೊಳ್ಳುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ www.vishwanandini.com ನ ಮುಖಾಂತರ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಿಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491